

ಅರುಣ ಪಿ. ಭಟ್ಟ

## ವಾರಭವಿಷ್ಯ: 11.01.2024ರಿಂದ 17.01.2024ರವರೆಗೆ




ವಾರದ ಶುರುವಿನಿಂದಲೇ ಉತ್ಸಾಹದಿಂದ ಕಾಣಿಸಿಕೊಳ್ಳುತ್ತೀರಿ. ನಿಮ್ಮ ವೈಯಕ್ತಿಕ ಶ್ರಮದಿಂದ ಹೆಚ್ಚಿನ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಆ ಕಾರಣಕ್ಕಾಗಿ ಹಲವು ಕೆಲಸ ಕಾರ್ಯಗಳನ್ನು ಪೂರೈಸಲಾಗುತ್ತದೆ. ಇದರಿಂದ ನಿಮಗೆ ಸಂತುಷ್ಟವಾಗುತ್ತದೆ. ನಿಮ್ಮ ಸಹೋದ್ಯೋಗಿಗಳ ಜೊತೆಗೆ ಇರುವ ಭಿನ್ನಾಭಿಪ್ರಾಯಗಳನ್ನು ಮರೆಯಲು ಪ್ರಯತ್ನ ಮಾಡುತ್ತೀರಿ. ಶುಭದಿನ 12. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಮನೆಯಲ್ಲಿ ಶುಭ ಕಾರ್ಯವನ್ನು ಆಯೋಜಿಸುವ ಸಾಧ್ಯತೆ ಇದೆ. ಈ ವಾರ ಗ್ರಹಗತಿಗಳು ನಿಮಗೆ ಅನುಕೂಲಕರವಾಗಿವೆ. ಈ ಅವಧಿಯಲ್ಲಿ ಅತಿ ಮುಖ್ಯವಾದ ಕೆಲಸಗಳನ್ನು ಮಾಡಿಕೊಂಡು ಬಿಡಿ. ಕೆಲಸಗಳಲ್ಲಿ ಯಶಸ್ಸು ಕಾಣಬಹುದು. ಉದ್ಯೋಗ ಸ್ಥಳದಲ್ಲಿ ನಿಮ್ಮ ವರ್ಚಸ್ಸು ಹೆಚ್ಚುವ ಸಾಧ್ಯತೆ ಇದೆ. ಸಹೋದ್ಯೋಗಿಗಳ ಜೊತೆ ಬಾಂಧವ್ಯ ಗಟ್ಟಿ ಆಗಲಿದೆ. ಶುಭದಿನ 15 . ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಆರೋಗ್ಯ ಸುಧಾರಿಸುವುದು. ಆಕಸ್ಮಿಕ ಖರ್ಚು ಸಂಭವ. ಆಸ್ತಿ ಖರೀದಿ ಬಗ್ಗೆ ಚಿಂತನೆ. ಕಲಾವಿದರಿಗೆ ಸಾಹಿತಿಗಳಿಗೆ ಉತ್ತಮ ವಾರವಿದು. ರಾಜಕೀಯದ ಅವಕಾಶ. ಸಂಘ ಸಂಸ್ಥೆಗಳಿಂದ ಧನಲಾಭ. ಶತ್ರುಗಳು ಹಿಂದೆ ಸರಿಯುವರು. ವೃತ್ತಿ ವ್ಯವಹಾರದಲ್ಲಿ ಲಾಭ. ಸರಕಾರಿ ಕೆಲಸ ಶೀಘ್ರ ಆಗುವುದು. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು. ಶುಭದಿನ 14. ಚಂಡಿ ಪಾರಾಯಣ ಮಾಡಿರಿ.




ನವೋಲ್ಲಾಸ ಬರುವುದು. ಧರ್ಮ ದಾನಕ್ಕಾಗಿ ಖರ್ಚು. ಮಿತ್ರರಿಗೆ ಸಹಾಯ. ವ್ಯಾಪಾರದಲ್ಲಿ ಅಧಿಕ ಲಾಭ. ಮನೆಗೆ ಹಳೆಯ ಮಿತ್ರರ ಆಗಮನ. ಹಲವು ದಿನಗಳ ಸಮಸ್ಯೆ ಬಗೆಹರಿಯುವುದು. ವಾರವಿಡೀ ಮನೆಯಲ್ಲಿ ಸಂಭ್ರಮದ ವಾತಾವರಣವಿರುವುದು. ಮಕ್ಕಳಿಂದ ಶುಭವಾರ್ತೆ. ದುಬಾರಿ ವಸ್ತುಗಳ ಖರೀದಿ ಮಾಡುವಿರಿ. ಮಹತ್ವದ ಕಾಗದ ಪತ್ರಗಳ ರಕ್ಷಣೆ. ಶುಭದಿನ 12. ಶಿವ ಕವಚ ಓದಿರಿ.




ಕುಟುಂಬ ಸದಸ್ಯರ ಜತೆಗೆ ಹೆಚ್ಚಿನ ಸಮಯ ಕಳೆಯುವ ಸಾಧ್ಯತೆ ಇದೆ. ಇದೇ ವೇಳೆ ಕುಟುಂಬದ ಸದಸ್ಯರಿಗೆ ಕೆಲವು ಕೆಲಸಗಳನ್ನು ವಹಿಸುತ್ತೀರಿ. ಅವುಗಳನ್ನು ತುಂಬ ಶ್ರದ್ಧೆಯಿಂದ ಅವರು ಮಾಡಿ ಮುಗಿಸುತ್ತಾರೆ. ಈ ಹಿಂದೆಂದಿಗಿಂತಲೂ ಈ ವಾರ ಹೆಚ್ಚು ಚಟುವಟಿಕೆಯಿಂದ ನೀವು ಇರಬೇಕಾಗುತ್ತದೆ. ಭೂ ವ್ಯಾಜ್ಯವೊಂದಕ್ಕೆ ಶ್ರಮ ಹಾಕಲಿದ್ದೀರಿ. ಶುಭದಿನ 15. ಸೌಂದರ್ಯಲಹರಿ ಪಠಿಸಿರಿ.




ನಿಮ್ಮ ತಾಂತ್ರಿಕ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಲವು ವ್ಯಕ್ತಿಗಳ ಪರಿಚಯ ಆಗುತ್ತದೆ. ನಿಮ್ಮಲ್ಲಿ ಆಗುತ್ತಿರುವ ಸಕಾರಾತ್ಮಕ ಪರಿಣಾಮ ಅನುಭವಕ್ಕೆ ಬರುತ್ತದೆ. ಕುಟುಂಬದೊಳಗೆ ಸಂತಸದ ವಾತಾವರಣ ಇರುತ್ತದೆ. ನಿಮ್ಮ ಆದಾಯ ಮೂಲಗಳಿಂದ ಬರುವ ಗಳಿಕೆ ಮತ್ತಷ್ಟು ಹೆಚ್ಚಾಗಲಿದೆ. ದೀರ್ಘಾವಧಿಯಲ್ಲಿ ದೊಡ್ಡ ಮಟ್ಟದ ಲಾಭ ಪಡೆಯುವ ಅವಕಾಶವೂ ಇದೆ. ಶುಭದಿನ 13. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ವೃತ್ತಿಪರ ಬದುಕಿನಲ್ಲಿ ಲಾಭ ಹಾಗೂ ಮಹತ್ತರವಾದ ಪ್ರಗತಿ ಕಾಣುವ ಯೋಗ ಇದೆ. ಸಂದರ್ಶನಗಳಲ್ಲಿ ಭಾಗವಹಿಸುವವರು ಅನುಕೂಲಕರ ಫಲಿತಾಂಶ ನಿರೀಕ್ಷಿಸಬಹುದು. ಮನೆಗೆ ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ ಮಾಡಲಿದ್ದೀರಿ. ವಾರದ ಮಧ್ಯ ಭಾಗದಲ್ಲಿ ಪ್ರಗತಿ ಮತ್ತಷ್ಟು ವೇಗ ಪಡೆದುಕೊಳ್ಳುತ್ತದೆ. ಶುಭದಿನ 16. ದೇವ್ಯಪರಾದ ಕ್ಷಮಾಪನಾ ಸ್ತೋತ್ರ ಪಠಿಸಿರಿ.




ಬಹಳ ಮುಖ್ಯವಾದ ಪಟ್ಟಿಯೊಂದನ್ನು ಸಿದ್ಧ ಮಾಡಿಕೊಳ್ಳುವುದಕ್ಕೆ ವಾರದ ಶುರುವಿನಲ್ಲಿ ಸಿದ್ಧರಾಗುತ್ತೀರಿ. ಕೆಲವು ವಿಚಾರಗಳು ಕಣ್ತಪ್ಪಿನಿಂದ ಬಿಟ್ಟು ಹೋಗುವ ಸಾಧ್ಯತೆ ಇದೆ. ಇದರಿಂದ ಹಿರಿಯ ಅಧಿಕಾರಿಗಳು ಬೇಸರಿಸಿಕೊಳ್ಳುತ್ತಾರೆ. ಈ ಅವಧಿಯಲ್ಲಿ ತಾಳ್ಮೆ ಮತ್ತು ಧೈರ್ಯ ಬಹಳ ಮುಖ್ಯವಾಗುತ್ತದೆ. ಮುಖ್ಯವಾಗಿ ಸಮಯದ ಕೊರತೆ ವಿಪರೀತವಾಗಿ ಕಾಡುತ್ತದೆ. ಶುಭದಿನ 14. ಶ್ರೀ ದುರ್ಗಾಪಾರಾಯಣ ಮಾಡಿರಿ.




ಆಸ್ತಿ ಖರೀದಿಗೆ ಪ್ರಯತ್ನಿಸುತ್ತಿರುವವರು ಸಂಬಂಧಪಟ್ಟ ಕಾಗದಪತ್ರಗಳನ್ನು ಕೂಲಂಕಷವಾದ ಪರಿಶೀಲನೆ ನಡೆಸಲಿದ್ದೀರಿ. ಈ ಸಮಯದಲ್ಲಿ ಆರೋಗ್ಯ ಸ್ಥಿತಿ ಪೂರಕವಾಗಿಲ್ಲ. ಅನಾರೋಗ್ಯ ನಿಮ್ಮನ್ನು ಕಾಡಲಿದೆ. ಇದರಿಂದ ಚಿಂತೆಗೆ ಒಳಗಾಗುತ್ತೀರಿ. ಇನ್ನು ವೈಯಕ್ತಿಕ ಸಂಬಂಧದಲ್ಲಿ ಕೆಲವು ಕಹಿ ಬೆಳವಣಿಗೆಗಳು ಆಗಲಿವೆ. ಶುಭದಿನ 11. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ವಾರದ ಶುರುವಿನಲ್ಲೇ ವ್ಯಾಪಾರ ಉದ್ಯಮದಲ್ಲಿ ಪ್ರಗತಿ ಕಾಣಿಸುತ್ತದೆ. ಇದರಿಂದ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಪ್ರತಿಷ್ಠಿತ ಸಂಸ್ಥೆಯೊಂದರ ಜತೆಗೆ ಮಹತ್ವದ ಒಪ್ಪಂದವೊಂದಕ್ಕೆ ಸಹಿ ಹಾಕುವ ಸಾಧ್ಯತೆಗಳಿವೆ. ಆರೋಗ್ಯದಲ್ಲಿ ಯಾವುದೇ ಮುಖ್ಯ ಸಮಸ್ಯೆ ಕಾಡುವುದಿಲ್ಲ. ಇದರಿಂದ ಎಷ್ಟೇ ಚಟುವಟಿಕೆ ಒತ್ತಡದ ಕೆಲಸ ಇದ್ದರೂ ಆರಾಮವಾಗಿ ಪೂರೈಸಲು ನಿಮ್ಮಿಂದ ಸಾಧ್ಯವಾಗಲಿದೆ. ಶುಭದಿನ 11. ಕಾಲಭೈರವನ ಸೇವೆ ಮಾಡಿರಿ.




ನಿಮ್ಮ ಹಣದ ಸದುಪಯೋಗ ಮಾಡಿಕೊಳ್ಳುವ ಬಗ್ಗೆ ಯೋಜನೆ ರೂಪಿಸಲಿದ್ದೀರಿ. ಆನಂತರ ಅದರ ಅನುಷ್ಠಾನಕ್ಕಾಗಿ ಹಾಕುವ ಶ್ರಮಕ್ಕೆ ನಿರೀಕ್ಷಿತ ಫಲಿತಾಂಶ ಕೂಡ ದೊರೆಯಲಿದೆ. ಮಾರಾಟ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಅತ್ಯುತ್ತಮ ಅವಕಾಶಗಳಿವೆ. ನೀವು ಹಾಕಿಕೊಂಡ ಗುರಿಯನ್ನು ಅಂದುಕೊಂಡಂತೆ ತಲುಪುವ ಸಾಧ್ಯತೆಗಳಿವೆ. ಶುಭದಿನ 14. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ದೇವತಾ ಆರಾಧನೆಗೆ ನಿಮ್ಮ ಶ್ರಮ ಹಾಕುತ್ತೀರಿ. ಬಹಳ ಒತ್ತಡ ಹಾಕಿ ನಿಮ್ಮಿಂದ ಕೆಲಸ ತೆಗೆಸುವ ಯತ್ನಗಳಾಗುತ್ತವೆ. ಉದ್ಯೋಗ ಸ್ಥಳದಲ್ಲಿ ಭಾವನಾತ್ಮಕವಾಗಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲಿದ್ದೀರಿ. ಈ ಅವಧಿಯಲ್ಲಿ ಸ್ವಲ್ಪ ಆರೋಗ್ಯ ಸಮಸ್ಯೆ ಕಾಡಬಹುದು. ಆಮೇಲೆ ಆರೋಗ್ಯದಲ್ಲಿ ಚೇತರಿಕೆ ಕಾಣಿಸಿಕೊಳ್ಳುತ್ತದೆ. ಶುಭದಿನ 13. ಕನಕಧಾರಾ ಸ್ತೋತ್ರ ಪಠಣ ಮಾಡಿರಿ.